

‘ಕ್ಷಮಯಾಧರಿತ್ರಿ’ ಎನ್ನುವುದು ಭೂಮಿಯೊಂದಿಗೆ ತಳಕು ಹಾಕಿಕೊಂಡಿರುವ ವಿಶೇಷಣ. ಆದರೆ, ಸಹನೆಗೂ ಕೊನೆಯಿದೆಯಲ್ಲವೇ? ಸಹನೆ ತೀರಿದಾಗ, ಕ್ಷಮೆ ಹಿಂದುಳಿದು ಧರಿತ್ರಿಯ ಕೋಪಕ್ಕೆ ಮನುಷ್ಯ ತುತ್ತಾಗಬೇಕಾಗುತ್ತದೆ. ಪ್ರಕೃತಿಯ ಮುಂದೆ ತಾನೊಂದು ಹುಲ್ಲುಕಡ್ಡಿ ಎಂದು ತಿಳಿದಿದ್ದರೂ ಆಟಾಟೋಪ ಪ್ರದರ್ಶಿಸುವ ಮನುಷ್ಯನಿಗೆ ಪ್ರಕೃತಿ ಆಗಾಗ ಪೆಟ್ಟು ಕೊಡುತ್ತಲೇ ಇರುತ್ತದೆ. ಈಗಂತೂ ಕೊರೊನಾ ಹೆಸರಿನಲ್ಲಿ ಬಲವಾದ ಪೆಟ್ಟನ್ನೇ ಕೊಟ್ಟಿದೆ. ಭೂಮಿಯೊಂದಿಗಿನ ತನ್ನ ಸಖ್ಯವನ್ನು ವಿಮರ್ಶೆಗೊಡ್ಡಿಕೊಳ್ಳಲು ಮನುಕುಲಕ್ಕಿದು ಮತ್ತೊಂದು ಅವಕಾಶ. ಅಂದಹಾಗೆ, ಈ ಕೊರೊನಾ ಸಂದರ್ಭದಲ್ಲಿ ಭೂಮಿಯ ಗಾಯಗಳು ಜಾದೂವಿನಂತೆ ಮಾಯುತ್ತಿರುವುದನ್ನು ನೋಡಿದರೆ, ನಮ್ಮ ಈವರೆಗಿನ ಕ್ರೌರ್ಯದ ಬಗ್ಗೆ ನಾವೇ ನಾಚಿಕೆಪಟ್ಟುಕೊಳ್ಳುವಂತಾಗುತ್ತದೆ. ನಮ್ಮ ಆರೋಗ್ಯದೊಂದಿಗೆ, ಭೂಮಿಯ ಆರೋಗ್ಯದ ಬಗ್ಗೆಯೂ ಗಮನಹರಿಸುವ ಸಮಯವಿದು.

■ ಟಿ.ಆರ್. ಅನಂತರಾಮು

# ಭೂಮಿಯೇ ಅಧಿಪತಿ ಮಾನವ ಬೆದರುಗೊಂಬೆ

